## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಜೇವರ್ಗಿ

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 322/2018**

**ಚಾ.ಸಾ– 23**

**ಫ್ರಾ.ಸಾ – 4**

**ಸಾಕ್ಷಿಗೆ ದಿನಾಂಕ 24 –06–2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಡಾಃ ನಜೀಮಾ |
| ತಂದೆ ಹೆಸರು | ಃ | ಅಬ್ದುಲ ಹಮೀದ |
| ವಯಸ್ಸು | ಃ | 42 ವರ್ಷ |
| ಉದ್ಯೋಗ | ಃ | ENT ವೈದ್ಯರು, ಆಳಂದ ಸರಕಾರಿ ಆಸ್ಪತ್ರೆ |
| ವಾಸಸ್ಥಳ | ಃ | ಆಳಂದ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

2013 ರಿಂದ 2016 ವರೆಗೆ ಸಾರ್ವಜನಿಕ ಆಸ್ಪತ್ರೆ, ಜೇವರ್ಗಿಯಲ್ಲಿ ENT ತಜ್ಞಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1) ದಿಃ 13–03–2015 ರಂದು ರಾತ್ರಿ 07–50 ಗಂಟೆಗೆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿದ್ದಾಗ ಚಾಸಾ–14 ಸುಮೀತ್ರಾರವರನ್ನು ಅಪಘಾತದ ಹಿನ್ನೆಲೆಯಲ್ಲಿ ಅಂಬ್ಯುಲೆನ್ಸ್ ವಾಹನದಲ್ಲಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಸುಮಿತ್ರಾರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ತಲೆಯ ಮೇಲೆ ತರಚಿದ ಗಾಯವಿತ್ತು.

ಸದರಿ ಗಾಯಗಳ ಚಿಕಿತ್ಸೆಗಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಸುಮಿತ್ರಾ ಕಾಮರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಆದರೆ ಆ ನಂತರ ನನ್ನ ಹತ್ತಿರ ಬಂದಿರುವುದಿಲ್ಲ. ಸದರಿ ಸುಮಿತ್ರಾರವರಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಸದರಿ ಗಾಯಗಳ ಅವಧಿ ಸುಮಾರು 4 ಗಂಟೆವರೆಗೆ ಇರಬಹುದು. ನಾನು ಸುಮಿತ್ರಾರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು.

2) ಅದೇ ದಿನ ಅಂಬ್ಯುಲೆನ್ಸ್ ವಾಹನದಲ್ಲಿ ಸಿದ್ದು ತಂದೆ ಜಾನಪ್ಪರವರನ್ನು ಅಪಘಾತದ ಹಿನ್ನೆಲೆಯಲ್ಲಿ ಅಂಬ್ಯುಲೆನ್ಸ್ ವಾಹನದಲ್ಲಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಸಿದ್ದುರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಮೂಗು ಹಾಗೂ ಕೆಳತುಟಿಯ ಮೇಲೆ ತರಚಿದ ಗಾಯವಿತ್ತು.

ಸದರಿ ಗಾಯಗಳ ಚಿಕಿತ್ಸೆಗಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಸಿದ್ದು ತಲೆಯ X–Ray ಪಡೆದುಕೊಂಡಿದ್ದು ಸದರಿ ಎಕ್ಸ್ ರೆ ವರದಿ ಪ್ರಕಾರ ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಆದರೆ ಆ ನಂತರ ನನ್ನ ಹತ್ತಿರ ಬಂದಿರುವುದಿಲ್ಲ. ಸದರಿ ಗಾಯಗಳ ಅವಧಿ ಸುಮಾರು 4 ಗಂಟೆವರೆಗೆ ಇರಬಹುದು. ನಾನು ಸಿದ್ದುರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು.

3) ಅದೇ ದಿನ ಅಂಬ್ಯುಲೆನ್ಸ್ ವಾಹನದಲ್ಲಿ ಚಾಸಾ–13 ಗೌರಮ್ಮರವರನ್ನು ಅಪಘಾತದ ಹಿನ್ನೆಲೆಯಲ್ಲಿ ಅಂಬ್ಯುಲೆನ್ಸ್ ವಾಹನದಲ್ಲಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಗೌರಮ್ಮರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಬಲಭುಜದ ಮೇಲೆ ತರಚಿದ ಗಾಯವಿತ್ತು.

ಸದರಿ ಗಾಯಗಳ ಚಿಕಿತ್ಸೆಗಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಗೌರಮ್ಮರವರ ಭುಜದ X–Ray ಪಡೆದುಕೊಂಡಿದ್ದು ಸದರಿ ಎಕ್ಸ್ ರೆ ವರದಿ ಪ್ರಕಾರ ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಆದರೆ ಆ ನಂತರ ನನ್ನ ಹತ್ತಿರ ಬಂದಿರುವುದಿಲ್ಲ. ಸದರಿ ಗಾಯಗಳ ಅವಧಿ ಸುಮಾರು 4 ಗಂಟೆವರೆಗೆ ಇರಬಹುದು. ನಾನು ಗೌರಮ್ಮರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-8 ಎಂದು ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು.

4) ಅದೇ ದಿನ ಅಂಬ್ಯುಲೆನ್ಸ್ ವಾಹನದಲ್ಲಿ ಚಾಸಾ–16 ಶರಣಪ್ಪರವರನ್ನು ಅಪಘಾತದ ಹಿನ್ನೆಲೆಯಲ್ಲಿ ಅಂಬ್ಯುಲೆನ್ಸ್ ವಾಹನದಲ್ಲಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಶರಣಪ್ಪರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಹಣೆ ಮತ್ತು ತಲೆಯ ಮೇಲೆ ತರಚಿದ ಗಾಯ ಹಾಗೂ ಬಾವು ಇತ್ತು.
2. ಎರಡೂ ಕಾಲುಗಳ ಮೇಲೆ ತರಚಿದ ಗಾಯವಿತ್ತು.

ಸದರಿ ಗಾಯಗಳ ಚಿಕಿತ್ಸೆಗಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಶರಣಪ್ಪರವರನ್ನು ಕಾಮರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಆದರೆ ಆ ನಂತರ ನನ್ನ ಹತ್ತಿರ ಬಂದಿರುವುದಿಲ್ಲ. ಸದರಿ ಸುಮಿತ್ರಾರವರಿಗೆ ಆದಂತಹ ಗಾಯಗಳು ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ. ಸದರಿ

ಗಾಯಗಳ ಅವಧಿ ಸುಮಾರು 4 ಗಂಟೆವರೆಗೆ ಇರಬಹುದು. ನಾನು ಶರಣಪ್ಪರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

5) ಅದೇ ದಿನ ಅಂಬ್ಯುಲೆನ್ಸ್ ವಾಹನದಲ್ಲಿ ಚಾಸಾ-15 ಶಿವಮ್ಮರವರನ್ನು ಅಪಘಾತದ ಹಿನ್ನೆಲೆಯಲ್ಲಿ ಅಂಬ್ಯುಲೆನ್ಸ್ ವಾಹನದಲ್ಲಿ ಜೇವರ್ಗಿ ಸರಕಾರಿ ಆಸ್ಪತ್ರೆಗೆ ಕರೆತರಲಾಗಿತ್ತು. ಶರಣಪ್ಪರವರನ್ನು ಪರೀಕ್ಷಿಸಲಾಗಿ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. 3x1 c.m. ಅಳತೆಯ ತರಚಿದ ಗಾಯವಿತ್ತು.

ಸದರಿ ಗಾಯಗಳ ಚಿಕಿತ್ಸೆಗಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕಳುಹಿಸಿದ್ದು ಸದರಿ ಶಿವಮ್ಮರವರ ತಲೆಯ X-Ray ಪಡೆದುಕೊಂಡಿದ್ದು ಸದರಿ ಎಕ್ಸ್ ರೆ ವರದಿ ಪ್ರಕಾರ ಸಾಮಾನ್ಯ ಸ್ವರೂಪದ ಗಾಯವಾಗಿತ್ತು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ಆದರೆ ಆ ನಂತರ ನನ್ನ ಹತ್ತಿರ ಬಂದಿರುವುದಿಲ್ಲ. ಸದರಿ ಗಾಯಗಳ ಅವಧಿ ಸುಮಾರು 4 ಗಂಟೆವರೆಗೆ ಇರಬಹುದು. ನಾನು ಶಿವಮ್ಮರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು.

ನಿಪಿ-6 ರಿಂದ 10ರಲ್ಲಿ ನಮೂದಿಸಿರುವ ಗಾಯಗಳು ಸಾಮಾನ್ಯವಾಗಿ ಜೀಪು ಮತ್ತು ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದಲ್ಲಿ ಜೀಪಿನಲ್ಲಿ ಕುಳಿತಿರುವವರಿಗೆ ಮೇಲೆ ತಿಳಿಸಿದಂತಹ ಗಾಯಗಳು ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲುಃ ಶ್ರೀ ಎಸ್.ಬಿ.ವೈ. ಆರೋಪಿ ಪರ ವಕೀಲರಿಂದ</u>

ನಿಪಿ-6 ರಿಂದ 10 ರ ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ವಯಸ್ಸು ನಮೂದಿಸಿಲ್ಲ. ನಿಪಿ-6 ರಿಂದ 10 ರ ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಬಣ್ಣವನ್ನು ನಮೂದಿಸಿಲ್ಲ. ಸಾಮಾನ್ಯವಾಗಿ ನಿಂತ ಲಾರಿ ವಾಹನಕ್ಕೆ ಹಿಂದಿನಿಂದ ಮತ್ತೊಂದು ವಾಹನ ವೇಗವಾಗಿ ಬಂದು ಡಿಕ್ಕಿಪಡಿಸಿದಲ್ಲಿ ಜೀಪಿನಲ್ಲಿ ಕುಳಿತಿದ್ದವರಿಗೆ ಮೇಲೆ ತಿಳಿಸಿದಂತಹ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ನಿಜ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ**

**ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರ್ಗಿ**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯದಲ್ಲಿ, ಜೇವರಗಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: **322/2018**

ಚಾ.ಸಾ-**6**
ಫ್ರಾ.ಸಾ-**5**

ಸಾಕ್ಷಿಗೆ ದಿನಾಂಕ **24-06-2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಃ | ಮಲ್ಲಪ್ಪ |
| ತಂದೆಯ ಹೆಸರು | ಃ | ರಾಮಗೊಂಡ |
| ವಯಸ್ಸು | ಃ | 38-ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಮದರಿ |

<u>ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಆರೋಪಿ ಗೊತ್ತಿಲ್ಲ. ಚಾಸಾ-1 , 7 ರಿಂದ 20 ಗೊತ್ತು. ಮೃತ ಮಲ್ಲಣ್ಣ ತಳವಾರ ಗೊತ್ತು. ನನಗೆ ಪ್ರಕರಣದ ವಿಚಾರಗಳು ಗೊತ್ತಿಲ್ಲ. ಸುಮಾರು 5-6 ವರ್ಷಗಳ ಹಿಂದೆ ಮದರಿ ಗ್ರಾಮದಿಂದ ಸಗರ ಗ್ರಾಮಕ್ಕೆ ಕ್ರೂಸರ್ ವಾಹನದಲ್ಲಿ ನಾನು, ಖಂಡಪ್ಪ, ರವಿ, ಗೌರಮ್ಮ, ಸುಮಿತ್ರಾ, ಮಲ್ಲಪ್ಪ, ಮಲ್ಲಣ್ಣ ತಳವಾರ ಹೋಗಿದ್ದೆವು. ನಾವು ವಾಪಾಸ್ ಬರುವಾಗ ರಾತ್ರಿ 07-30 ಗಂಟೆ ಸಮಯದಲ್ಲಿ ಮುದಬಾಳ ಕ್ರಾಸ್ ಮುಂದೆ ನಮ್ಮ ಕ್ರೂಸರ್ ವಾಹನ ಮುಂದೆ ಹೋಗುತ್ತಿದ್ದ ಲಾರಿ ವಾಹನಕ್ಕೆ ಡಿಕ್ಕಿ ಆಗಿರುತ್ತದೆ. ಸದರಿ ಕ್ರೂಸರ್ ವಾಹನದ ನೊಂದಣಿ ನಂ. ಹಾಗೂ ಅದನ್ನು ಯಾರು ಚಾಲನೆ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ. ಸದರಿ ಕ್ರೂಸರ್ ವಾಹನವನ್ನು ಶಿವಕುಮಾರ ವಿಶ್ವಕರ್ಮ ಚಲಾಯಿಸುತ್ತಿದ್ದನು. ಲಾರಿ ಚಾಲಕನ ಹೆಸರು ಗೊತ್ತಿಲ್ಲ. ಅಪಘಾತದಲ್ಲಿ ಮಲ್ಲಣ್ಣ ತಳವಾರ ಮೃತಪಟ್ಟಿದ್ದು ನನಗೆ ತಲೆಗೆ ಗಾಯವಾಗಿ ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ. ಬೇರೆಯವರಿಗೆ ಏನು ಗಾಯಗಳಾಗಿರುತ್ತವೆಂದು ಗೊತ್ತಿಲ್ಲ, ಅಪಘಾತ ಯಾರ ತಪ್ಪಿನಿಂದಾಗಿರುತ್ತದೆಂದು ಗೊತ್ತಿಲ್ಲ, ಅಪಘಾತವಾದ ನಂತರ ಪೊಲೀಸರು ನನಗೆ ಯಾವುದೇ ವ್ಯಕ್ತಿಯನ್ನು ತೋರಿಸಿಲ್ಲ. ಪೊಲೀಸರಿಗೆ ನಾನು ಯಾವುದೆ ಹೇಳಿಕೆಯನ್ನು ನೀಡಿಲ್ಲ. ಸಾಕ್ಷಿಗೆ ನಿಪಿ-3 ಮತ್ತು 4 ಲ್ಲಿರುವ ಕ್ರೂಸರ್ ವಾಹನದ ಛಾಯಾಚಿತ್ರಗಳನ್ನು ನೋಡಿ ಗುರುತಿಸಿಲ್ಲ. ಸಾಕ್ಷಿಗೆ 2 ಲಾರಿ ಛಾಯಾಚಿತ್ರಗಳನ್ನು ತೋರಿಸಲಾಗಿ ಅದರಲ್ಲಿರುವ ಲಾರಿಯನ್ನು ನೋಡಿ ಗುರುತಿಸಿಲ್ಲ

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ದಿನಾಂಕ 13-03-2015 ರಂದು ಸಾಯಂಕಾಲ 6.30 ಗಂಟೆ ಸಮಯದಲ್ಲಿ ಮುದಬಾಳ ಕ್ರಾಸ್ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ 2 ನೇ ಆರೋಪಿ ಲಾರಿ ನಂ.MH-38 D-0514 ನ್ನು ಅತಿವೇಗ

ಮತ್ತು ಅಜಾಗರೂಕತೆ ಹಾಗೂ ನಿಷ್ಕಾಳಜಿತನದಿಂದ ಚಾಲನೆ ಮಾಡಿ ಒಮ್ಮೆಲೆ ಬ್ರೇಕ್ ಹಾಕಿದ ಕಾರಣ ಹಿಂಬದಿಯಲ್ಲಿ 1 ನೇ ಆರೋಪಿ ಚಾಲನೆ ಮಾಡಿಕೊಂಡು ಬರುತ್ತಿದ್ದ ಕ್ರೂಸರ್ ವಾಹನ ನಂ. ಕೆಎ-32 ಎಂ-6243 ಲಾರಿ ವಾಹನಕ್ಕೆ ಡಿಕ್ಕಿಯಾಗುವಂತೆ ಮಾಡಿ ಅಪಘಾತಪಡಿಸಿರುತ್ತಾರೆಂದರೆ ಸಾಕ್ಷಿ ರಾತ್ರಿಯಾಗಿದ್ದರಿಂದ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಲಾರಿ ಚಾಲಕನ ಹೆಸರು ಶೇಖ್ ಮೆಹ್ತಾಬ್ ಎಂದರೆ ಗೊತ್ತಿಲ್ಲ. ಅಪಘಾತದ ವಿಚಾರವಾಗಿ ಲಾರಿ ಮತ್ತು ಕ್ರೂಸರ್ ವಾಹನಗಳ ಚಾಲಕರ ತಪ್ಪಿನಿಂದಾಗಿರುತ್ತದೆಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಈ ವಿಚಾರವಾಗಿ ದಿನಾಂಕ 14-03-2015 ರಂದು ಈಗ ಓದಿ ಹೇಳಿದಂತೆ ಸಂಜೆ 06-30 ………………………………………….………… ಸಂಭವಿಸಿರುತ್ತದೆ" ಅಂತಾ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆ ಭಾಗವನ್ನು ಅಲ್ಲಗಳೆದ ಕಾರಣ ಸಾಕ್ಷಿ ಹೇಳಿಕೆ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು. ದಿನಾಂಕ 16-03-2015 ರಂದು ಲಾರಿ ಚಾಲಕನನ್ನು ಗುರುತಿಸಿದ ಬಗ್ಗೆ ಈಗ ಓದಿ ಹೇಳಿದಂತೆ ತಾನು ನಡೆಸುತ್ತಿರುವ …………………………………………………………………… ಅಂತಾ ಹೇಳಿದನು" ಅಂತಾ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಮರುಹೇಳಿಕೆ ಭಾಗವನ್ನು ಅಲ್ಲಗಳೆದ ಕಾರಣ ಸಾಕ್ಷಿ ಮರುಹೇಳಿಕೆ ಭಾಗವನ್ನು ನಿಪಿ-12 ಎಂದು ಗುರುತಿಸಲಾಯಿತು. ಅಪಘಾತದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವೈ. ವಕೀಲರಿಂದ</u>

ಸಗರ ಗ್ರಾಮವನ್ನು ಆ ದಿನ ಬಿಟ್ಟಾಗ ಸಮಯ ಸಂಜೆ 05-30 ಆಗಿತ್ತು. ಸದರಿ ಶಹಾಪೂರ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಓಡಾಡುತ್ತವೆಂದರೆ ನಿಜ. ಆ ಸಮಯದಲ್ಲಿ ನಸುಕು ಆಗಿತ್ತು ಎಂದರೆ ನಿಜ. ಮುದಬಾಳ ಕ್ರಾಸ್ ಬಳಿ ಸಾಕಷ್ಟು ವಾಹನಗಳು ನಿಲ್ಲುವುದು ಮಾಡುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಾನು ಕುಳಿತುಕೊಂಡು ಹೋಗುತ್ತಿದ್ದ ಕ್ರೂಸರ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡುತ್ತಿದ್ದ ಎಂದರೆ ನಿಜ. ಕ್ರೂಸರ್ ವಾಹನ ನಿಂತಿದ್ದ ಲಾರಿ ವಾಹನಕ್ಕೆ ಡಿಕ್ಕಿಪಡಿಸಿದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಪಘಾತವು ಕ್ರೂಸರ್ ವಾಹನದ ಚಾಲಕನ ತಪ್ಪಿನಿಂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕ್ರೂಸರ್ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿ ಲಾರಿಗೆ ಡಿಕ್ಕಿಪಡಿಸಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ನಿಜ. ಮೃತ ಮಲ್ಲಣ್ಣ ತಳವಾರ ಹಾಗೂ ಸಂಬಂಧಿಕರಲ್ಲ ಆದರೆ ಒಂದೇ ಗ್ರಾಮದವರು. ಮಲ್ಲಣ್ಣನ ವಾರಸುದಾರರಿಗೆ ಪರಿಹಾರ ಧನ ನೀಡಲೆಂದು ಸಾಕ್ಷಿ ನುಡಿಯುತ್ತಿದ್ದೇನೆಂದರೆ ನಿಜ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಾಗಿರದೇ ಕ್ರೂಸರ್ ವಾಹನದ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ನಿಜ.

ಮರುವಿಚಾರಣೆ:ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು, ಜೇವರಗಿ